ಇ) ಆಯುಷ್ ವೈದ್ಯರ ಸಂಬಳ ಮತ್ತಿತರ ಸವಲತ್ತುಗಳನ್ನು ನೀಡುವಲ್ಲಿ ಇರುವ ತಾರತಮ್ಯದ ಬಗ್ಗೆ 5ನೇ ವೇತನ ಆಯೋಗದ ಮುಂದೆ ಮಂಡಿಸಲಾಗಿತ್ತು. ಆದರೆ, ಆಯೋಗವು ವೈದ್ಯರು ದರ್ಜೆ–2 ಕ್ಕೆ ಸಂಬಂಧಿಸಿದಂತೆ ಮಾತ್ರ ವೇತನ ಶ್ರೇಣಿ ರೂ. 11400–21600 ರಿಂದ ರೂ. 13000–23850 ಕ್ಕೆ ಪರಿಷ್ಕರಿಸಲು ಶಿಫಾರಸ್ಸು ಮಾಡಿದ್ದು, ಆ ಪ್ರಕಾರ ಆದೇಶ ಹೊರಡಿಸಲಾಗಿದೆ. ಇತರೆ ಕೇಡರ್‌ಗಳ ವೇತನ ಪರಿಷ್ಕರಣೆಗೆ ವೇತನ ಆಯೋಗವು ಒಪ್ಪಿರುವುದಿಲ್ಲ.

ರಾಜ್ಯ ವಕ್ಫ್ ಮಂಡಳಿಯನ್ನು ಸೂಪರ್ ಸೀಡ್ ಮಾಡಿರುವುದು

866 (1484) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯನ್ನು ಸೂಪರ್ ಸೀಡ್ ಮಾಡಲು ಸರ್ಕಾರದ ಸಮರ್ಥನೆಗಳೇನು;

ಆ) ವಕ್ಫ್ ಮಂಡಳಿಯ ವಿರುದ್ಧ ಇರುವ ಆರೋಪಗಳು ಯಾವುವು; ಮೇಲ್ನೋಟಕೆ ಸಾಬೀತಾಗಿರುವ ಆರೋಪಗಳು ಎಷ್ಟು; ಅವುಗಳನ್ನು ಪುಷ್ಟೀಕರಿಸುವ ದಾಖಲೆಗಳನ್ನು ಸರ್ಕಾರ ಹೊಂದಿದೆಯೇ;

ಇ) ರಾಜ್ಯದಲ್ಲಿ ವಕ್ಫ್ ಮಂಡಳಿಯ ಜಮೀನು ಮಾರಾಟಗಳಲ್ಲಿ ಅವ್ಯವಹಾರ ನಡೆದಿರುವ ಖಚಿತ ಪ್ರಕರಣಗಳೆಷ್ಟು ವಕ್ಫ್ ಮಂಡಳಿಯನ್ನು ಸೂಪರ್ ಸೀಡ್ ಮಾಡುವುದರಿಂದ ಅಲ್ಪಸಂಖ್ಯಾತರಿಗಾಗಲಿ ಮತ್ತು ಸರ್ಕಾರಕ್ಕಾಗಲಿ ಆಗುವ ಪ್ರಯೋಜನಕಾರಿ ಅಂಶಗಳೇನು;

ಈ) ಇದ್ದಲ್ಲಿ, ಪ್ರಜಾಪ್ರಭುತ್ವದ ತತ್ವಗಳಡಿಯಲ್ಲಿ ವಕ್ಫ್ ಮಂಡಳಿಯ ಕಾರ್ಯನಿರ್ವಹಿಸಲು ಅನುಕೂಲ ಮಾಡಿಕೊಡುವ ಕುರಿತು ಸರ್ಕಾರದ ನಿಲುವುಗಳೇನು?

ಶ್ರೀ ಪ್ರೋ.ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ವಕ್ಫ್ ರಕ್ಷಣಾ ಜಂಟಿ ಕ್ರಿಯಾ ಸಮಿತಿ (ರಿ) ಮತ್ತು ಕರ್ನಾಟಕ ಮುಸ್ಲಿಂ ಸಂಘರ್ಷ ಸಮಿತಿ ಇವೆರಡು ಸಂಸ್ಥೆಗಳಿಂದ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವಿರುದ್ಧ ಹಲವಾರು ಆಪಾದನೆಗಳಿದ್ದು, ಸದರಿ ಆಪಾದನೆಗಳ ಪೈಕಿ ಪ್ರಮುಖ ಆರೋಪ:

ಅಣ್ಣೀಪುರ ಗ್ರಾಮದ ಸರ್ವೆ ನಂ.18, ಬೆಂಗಳೂರು, ಇಲ್ಲಿನ 2 ಎಕರೆ 3 ಗುಂಟೆ ಆಸ್ತಿ, ವಕ್ಫ್ ಸಂಸ್ಥೆಯಾದ ದರ್ಗಾ ಹಜರತ್ ಅತಾವುಲ್ಲಾ ಶಾ ಮತ್ತು ಹಜರತ್ ನಬಿಶಾ ದರ್ಗಾಗಳಿಗೆ (ಬಡಾ ಮಕಾನ್) ಸೇರಿದ್ದು, ಮಂಡಳಿ ರೂ. 1.00 ಕೋಟಿ ಸಂಭಾವನೆಯನ್ನು ದಿವಂಗತ ಶ್ರೀ ಭವರಿಲಾಲ್‌ರವರ ವಾರಸುದಾರರಿಂದ ಪಡೆದು, ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದ C/W W.P No. 24101/2006 ರಲ್ಲಿ ಮಂಡಳಿಯನ್ನು ಪ್ರತಿವಾದಿಯನ್ನಾಗಿ ಮಾಡದೇ ಇದ್ದರೂ ತಾವೇ ಖುದ್ದು ನ್ಯಾಯಾಲಯದಲ್ಲಿ ಸೇರ್ಪಡೆ ಅರ್ಜಿ ಹಾಕಿಕೊಂಡು ಸದರಿ ಆಸ್ತಿ ವಕ್ಫ್ ಆಸ್ತಿ ಅಲ್ಲವೆಂದು ಜಂಟಿ ಮೆಮೋವನ್ನು ಸಲ್ಲಿಸಿರುತ್ತಾರೆ. ಇದರಿಂದ ವಕ್ಫ್ ಸಂಸ್ಥೆಗೆ ಸುಮಾರು ರೂ. 20.00 ಕೋಟಿ ನಷ್ಟವಾಗಿದ್ದು, ಸದರಿ ಆಪಾದನೆಯನ್ನು ಸಿ.ಓ.ಡಿ. ಯಿಂದ ತನಿಖೆ ನಡೆಸಿದ್ದು, ತನಿಖಾ ವರದಿಯಿಂದ ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧಿಕಾರಿಗಳು, ಅಧ್ಯಕ್ಷರು ಹಾಗೂ ಸದಸ್ಯರು ಒಂದಾಗಿ ಖಾಸಗಿ ವ್ಯಕ್ತಿಯೊಡನೆ ಹೊಂದಾಣಿಕೆ ಮಾಡಿಕೊಂಡು ವಕ್ಫ್ ಮಂಡಳಿಗೆ ಆರ್ಥಿಕ ನಷ್ಟ ಉಂಟು ಮಾಡಿರುತ್ತಾರೆ ಎಂದು ತಿಳಿದು ಬಂದಿದೆ.

ಎರಡನೆಯದಾಗಿ ದರ್ಗಾ ಹಜರತ್ ಅತಾವುಲ್ಲಾ ಶಾ ಮತ್ತು ಹಜರತ್ ನಬಿಶಾ ದರ್ಗಾಗಳಿಗೆ (ಬಡಾ ಮಕಾನ್) ಸೇರಿದ ಅಣ್ಣೀಪುರ ಗ್ರಾಮದ ಸರ್ವೆನಂ.1 ರಲ್ಲಿ ವಕ್ಫ್ ಮಂಡಳಿ ಶ್ರೀ ಎಲ್ಲಪ್ಪರವರ legal representative ರೊಂದಿಗೆ ಮಾಡಿಕೊಂಡ ರಾಜಿ ಒಪ್ಪಂದದಿಂದ ವಕ್ಫ್ ಮಂಡಳಿಗೆ ಆರ್ಥಿಕ ನಷ್ಟವಾಗಿರುತ್ತದೆ.

ಆ) ಮಂಡಳಿಯ ವಿರುದ್ಧ ಆಪಾದನೆಗಳು ಈ ಕೆಳಕಂಡಂತಿದೆ.

1) ಅಣ್ಣೀಪುರ ಗ್ರಾಮದ ಸರ್ವೆ ನಂ.18, ಬೆಂಗಳೂರು, ಇಲಿನ 2 ಎಕರೆ 3 ಗುಂಟೆ ಆಸ್ತಿ, ವಕ್ಫ್ ಸಂಸ್ಥೆಯಾದ ದರ್ಗಾ ಹಜರತ್ ಅತಾವುಲಾ ಶಾ ಮತ್ತು ಹಜರತ್ ನಬಿಶಾ ದರ್ಗಾಗಳಿಗೆ (ಬಡಾ ಮಕಾನ್) ಸೇರಿದ್ದು, ಮಂಡಳಿ ರೂ.1.00 ಕೋಟಿ ಸಂಭಾವನೆಯನ್ನು ದಿವಂಗತ ಶ್ರೀ ಭವರಿಲಾಲ್‌ರವರ ವಾರಸುದಾರರಿಂದ ಪಡೆದು, ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದ್ದ C/W W.P No. 24101/2006 ರಲ್ಲಿ ಸದರಿ ಆಸ್ತಿ ವಕ್ಫ್ ಆಸ್ತಿ ಅಲ್ಲವೆಂದು ಜಂಟಿ ಮೆಮೋವನ್ನು ಸಲ್ಲಿಸಿರುತ್ತಾರೆ.

ಇದರಿಂದ ವಕ್ಫ್ ಸಂಸ್ಥೆಗೆ ಸುಮಾರು ರೂ.20.00 ಕೋಟಿ ನಷ್ಟವಾಗಿದೆ ಎಂದು ಸಿ.ಓ.ಡಿ ತನಿಖೆಯಿಂದ ತಿಳಿದು ಬಂದಿದೆ.

2) ದರ್ಗಾ ಹಜರತ್ ಅತಾವುಲ್ಲಾ ಶಾ ಮತ್ತು ಹಜರತ್ ನಬಿಶಾ ದರ್ಗಾಗಳಿಗೆ (ಬಡಾ ಮಕಾನ್) ಸೇರಿದ ಅಣ್ಣೀಪುರ ಗ್ರಾಮದ ಸರ್ವೆ ನಂ.1 ರಲ್ಲಿ ವಕ್ಫ್ ಮಂಡಳಿ ಶ್ರೀ ಎಲ್ಲಪ್ಪರವರ legal representative ರೊಂದಿಗೆ ಮಾಡಿಕೊಂಡ ರಾಜಿ ಒಪ್ಪಂದದಿಂದ ವಕ್ಫ್ ಮಂಡಳಿಗೆ ಆಗಿರುವ ಆರ್ಥಿಕ ನಷ್ಟ.

3) ಜೀಗನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರದ ಸತ್ತಾರಿಯ ವಕ್ಫ್, ಆಸ್ತಿಯನ್ನು ರಕ್ಷಿಸುವಲ್ಲಿ ವಿಫಲವಾದ ಬಗ್ಗೆ.

4) ಬೆಂಗಳೂರು ಮರ್ಕೆಂಟೈಲ್ ಕೋ–ಆಪರೇಟಿವ್ ಬ್ಯಾಂಕ್ ಮತ್ತು ಅಲ್ ಇಕ್ರಾ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿ ಸರ್ಕಾರದ ಹಣವನ್ನು ಠೇವಣಿ ಇಟ್ಟಿದ್ದು, ಈ ಹಣವನ್ನು ಹಿಂಪಡೆಯದೇ ಸರ್ಕಾರದ ಹಣವನ್ನು ರಕ್ಷಿಸುವಲ್ಲಿ ವಕ್ಫ್ ಮಂಡಳಿ ವಿಫಲಗೊಂಡಿರುತ್ತದೆ.

5) ವಕ್ಫ್ ಅಧಿನಿಯಮ 1995ರ ಕಾಯ್ದೆ 97 ರಂತೆ ಹಲವಾರು ವಿಷಯಗಳ ಮೇಲೆ ಸರ್ಕಾರ ಮಂಡಳಿಗೆ ನಿರ್ದೇಶನ ನೀಡಿದ್ದು ಈ ನಿರ್ದೇಶನಗಳನ್ನು ಮಂಡಳಿ ಪಾಲಿಸದೇ ಇರುವುದು.

6) ವಕ್ಫ್, ಅಧಿನಿಯಮ 1995ರ ಕಾಯ್ದೆ 29(1)(ಸಿ) ಪ್ರಕಾರ ಯಾವುದೇ ಮಂಡಳಿಯ ಸದಸ್ಯ ಸತತವಾಗಿ ಮೂರು ಸಭೆಗಳಿಗೆ ಹಾಜರಾಗದೇ ಇದ್ದಲ್ಲಿ ಇಂತಹ ಸದಸ್ಯರನ್ನು ವಜಾ ಮಾಡಬೇಕಾಗಿದ್ದು, ಈ ನಿಟ್ಟಿನಲ್ಲಿ ಮಂಡಳಿ ಕ್ರಮ ಕೈಗೊಂಡಿರುವುದಿಲ್ಲ.

7) ವಕ್ಫ್ ಅಧಿನಿಯಮ 1995ರ ಕಾಯ್ದೆ 65(3)ರ ಪ್ರಕಾರ ಮಂಡಳಿಯ ನೇರ ನಿರ್ವಹಣೆಯಲ್ಲಿರುವ ವಕ್ಫ್ ಸಂಸ್ಥೆಗಳಿಗೆ 5 ವರ್ಷಗಳ ಅವಧಿಯೊಳಗೆ ಕಾರ್ಯಕಾರಿ ಸಮಿತಿಗಳನ್ನು ರಚಿಸಬೇಕಾಗಿದ್ದು, ಈ ನಿಟ್ಟಿನಲ್ಲಿ ಮಂಡಳಿ

ಹಲವಾರು ಸಂಸ್ಥೆಗಳು 5 ವರ್ಷಗಳ ಅವಧಿಯ ನಂತರವೂ ಮಂಡಳಿಯ ನೇರ ನಿರ್ವಹಣೆಯಲ್ಲಿಯೇ ಮುಂದುವರೆಸಿ, ವಕ್ಫ್ ಅಧಿನಿಯಮದ ಕಾಯ್ದೆಯನ್ನು ಉಲ್ಲಂಘಿಸಿದೆ.

8) ವಕ್ಫ್ ಅಧಿನಿಯಮ 1995ರ ಕಾಯ್ದೆ 78(1) ರ ಪ್ರಕಾರ ಮಂಡಳಿ ತನ್ನ ಆಯವ್ಯಯವನ್ನು ಸರ್ಕಾರಕ್ಕೆ ಕಳುಹಿಸಿ ಅನುಮೋದನೆ ಪಡೆಯಬೇಕಾಗಿದ್ದು, ಇದನ್ನು ಪಡೆಯದೇ ವಕ್ಫ್ ಅಧಿನಿಯಮದ ಕಾಯ್ದೆಯನ್ನು ಉಲ್ಲಂಘಿಸಿದೆ.
9) ವಕ್ಫ್ ಅಧಿನಿಯಮ 1995ರ ಕಾಯ್ದೆ 80ರ ಪ್ರಕಾರ ವಕ್ಫ್ ಮಂಡಳಿಯ ಲೆಕ್ಕ ಪರಿಶೋಧಕರ ನೇಮಕಾತಿಯನ್ನು ಸರ್ಕಾರದಿಂದ ಪಡೆಯಬೇಕಾಗಿದ್ದು, ಇದನ್ನು ಮಾಡದೇ ವಕ್ಫ್ ಅಧಿನಿಯಮದ ಕಾಯ್ದೆಯನ್ನು ಉಲ್ಲಂಘಿಸಿದೆ.
10) ವಕ್ಫ್ ಅಧಿನಿಯಮ 1995ರ ಕಾಯ್ದೆ 81ರ ಪ್ರಕಾರ ಮಂಡಳಿ ಲೆಕ್ಕ ಪರಿಶೋಧನಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕಾಗಿದ್ದು, ಇದನ್ನು ಮಾಡದೇ ವಕ್ಫ್ ಅಧಿನಿಯಮ ಕಾಯ್ದೆ ಉಲ್ಲಂಘಿಸಿದೆ.

ಮೇಲ್ಕಂಡ ಹತ್ತು ಆರೋಪಗಳ ಪೈಕಿ ಮೂರು ಆರೋಪಗಳಿಗೆ ಮಂಡಳಿ ನೀಡಿದ ಸಮಜಾಯಿಷಿಯನ್ನು ಒಪ್ಪಲಾಗಿದ್ದು, ಆರು ಆರೋಪಗಳು ಪೂರ್ಣ, ಒಂದು ಆರೋಪ ಭಾಗಶಃ ಸಾಬೀತಾಗಿರುತ್ತವೆ. ಅವುಗಳನ್ನು ಪುಷ್ಠಿಕರಿಸುವ ದಾಖಲೆಗಳು ಸರ್ಕಾರ ಹೊಂದಿದೆ.

ಇ) ಪ್ರಶ್ನೆ ಅ ಗೆ ನೀಡಿರುವ ಉತ್ತರ ವಕ್ಫ್ ಮಂಡಳಿಯ ಜಮೀನು ಮಾರಾಟದಲ್ಲಿ ಅವ್ಯವಹಾರ ನಡೆದಿರುವ ಖಚಿತ ಪ್ರಕರಣ. ವಕ್ಫ್ ಮಂಡಳಿಯನ್ನು ಸೂಪರ್ ಸೀಡ್ ಮಾಡುವಲ್ಲಿ ಅಲ್ಪಸಂಖ್ಯಾತರ ವಕ್ಫ್ ಆಸ್ತಿಗಳನ್ನು ರಕ್ಷಿಸುವಲ್ಲಿ ಹಾಗೂ ಮಂಡಳಿಯ ಅವ್ಯವಹಾರಗಳನ್ನು ತಡೆಯಲು ಪ್ರಯೋಜನವಾಗಿರುತ್ತದೆ.

ಈ) ಮಂಡಲಿಯ ರದ್ದತಿ ಆದೇಶ ಉಚ್ಚನ್ಯಾಲಯಾಲಯದಲ್ಲಿ ಪ್ರಶ್ನಿಸಿದ್ದು ಸಿಟ್ ಅರ್ಜಿ ನ್ಯಾಯಾಲಯದಲ್ಲಿ ಬಾಕಿ ಇದೆ. ಉಚ್ಚ ನ್ಯಾಯಾಲಯದ ಅಂತಿಮ ಆದೇಶದ ನಂತರ ಆದೇಶದ ಅನುಗುಣವಾಗಿ

ಪ್ರಜಾಪ್ರಭುತ್ವದ ತತ್ವಗಳಡಿಯಲ್ಲಿ ವಕ್ಫ್ ಮಂಡಳಿಯು ಕಾರ್ಯನಿರ್ವಹಿಸಲು ಸರ್ಕಾರ ಕ್ರಮ ಕೈಗೊಳ್ಳುವುದು.

Filling up to vacant Posts of Doctors at humanbad Hospitals

867 (1485) ಶ್ರೀ ಕಾಕಾಸಾಹೇಬ್ ಪಾಂಡುರಂಗ ಪಾಟೀಲ್ (ನಿಪ್ಪಾಣಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

A) The number of Primary health Centers Community Health Centers and Taluk Hospitals in the limits of Nippani Assembly Constituency; The different places at which they are functioning; The number of beds in the hospitals;

B) The number of male Medical Officers, Lady Medical Officers, Staff Nurses and Para Medical Staff sanctioned in these hospitals;

C) Out of them the various posts filled and since when the different posts have fallen vacant; Whether hardship being caused to women for delivery especially due to vacant posts of Lady Medical Officers has come to the notice of the Government;

D) If so, when the vacant posts including the posts of Lady Medical Officers would be filled;

E) The proposal for up-grading the various health centers and hospitals in Nippani Constituenc during the current year is before the Government the amount would be spent for the same?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

a) There are 9 Primary Health Centers and I Community Health Centre in Nippani Assembly Constituency. There is no Taluk hospital in the said Constituency.

The details are as follows:-